ಡಿಸೆಂಬರ್ ಚಳಿಯಲ್ಲಿ ಹೊದ್ದುಕೊಳ್ಳುವುದಕ್ಕೆ ಹೊದಿಕೆ ಕೂಡ ಕೊಡದೆ, ಕ್ಯಾಜುಯಾಲಿಟಿ ವಾರ್ಡ್‌ನಲ್ಲಿ ಹುಡುಗ ಬಿದ್ದಿದ್ದ. ಭಾನುವಾರ ಬೆಳಿಗ್ಗೆ ಈ ಹುಡುಗನನ್ನು ನೋಡಲಿಕ್ಕೆ ಅವನ ಸ್ನೇಹಿತ ಹೋದರೆ, ಅವನನ್ನು ಹಾಸಿಗೆಯ ಮಂಚಕ್ಕೆ ಕಟ್ಟಿ ಹಾಕಿದ್ದರು. ಕೂಡಲೆ ಭಾನುವಾರ ಸಂಜೆ ಇವರು ಚಿಕಿತ್ಸೆ ಕೊಡುವುದಿಲ್ಲವೆಂದು ಗೊತ್ತಾದ ಮೇಲೆ ಅವನನ್ನು ಮಾರ್ಥಾಸ್ ಆಸ್ಪತ್ರೆಗೆ ಕರೆದುಕೊಂಡು ಹೋದರು. ಕ್ರಿಸ್‌ಮಸ್ ಆಚರಿಸಬೇಕಾದ ಯುವಕ 22ನೇ ತಾರೀಖು ಬೆಂಗಳೂರಿನಲ್ಲಿ ಸಾವನ್ನಪ್ಪಿದ. ವಿಕ್ಟೋರಿಯ ಆಸ್ಪತ್ರೆಯ ನಿರ್ಲಕ್ಷತನದಿಂದ ಈ ಒಂದು ಅಮಾನವೀಯ ಘಟನೆ ನಡೆದಿದೆ. ಇಷ್ಟು ಸಾಲದು ಎಂದು ಅಲ್ಲಿನ ವೈದ್ಯರು ಹೇಳುತ್ತಾರೆ, ಮ್ಯಾಥ್ಯುಸ್ ಎಂಬ ಹುಡುಗ ವಿಷ ಕುಡಿದು ಬಂದಿದ್ದ, ನಾವು ಬದುಕಿಸುವುದಕ್ಕೆ ಆಗಲಿಲ್ಲ ಎಂದು, ಇವತ್ತು ನನ್ನ ಹತ್ತಿರ ರಿಪೋರ್ಟ್ ಇದೆ, ಈತ ಸತ್ತಿರುವುದು ಮಲೇರಿಯದಿಂದ. ಈ ಒಂದು ಪರಿಸ್ಥಿತಿ ಇರುವಾಗ, ವಿಕ್ಟೋರಿಯ ಆಸ್ಪತ್ರೆಯ ಡಾಕ್ಟರ್ ಬಗ್ಗೆ ಅಲ್ಲಿನ ಪರಿಸ್ಥಿತಿ ಬಗ್ಗೆ ನೋಡಿದರೆ ವ್ಯಥೆಯಾಗುತ್ತದೆ. ಸಾಮಾನ್ಯ ಜನರು ಅಲ್ಲಿಗೆ ಹೋಗುವುದು ಹೇಗೆ? ಯಾರಿಗೆ ಖಾಸಗಿ ಆಸ್ಪತ್ರೆಗೆ ಹೋಗುವುದಕ್ಕೆ ಆಗುವುದಿಲ್ಲ, ಅಂತವರ ಅಲ್ಲಿಗೆ ಹೋಗುವುದು. ವೈದ್ಯರ ನಿಷ್ಕರಣೆಯಿಂದ ಸಾವನ್ನಪಿದ ಕಾರಣದಿಂದ ಆ ವೈದ್ಯರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಮತ್ತೆ ಮತ್ತೆ ಈ ಪ್ರಕರಣಗಳು ಮರುಕಳಿಸಬಾರದು ಎಂದು. ತಮ್ಮ ಮೂಲಕ ಸನ್ಮಾನ್ಯ ಸಚಿವರ ಗಮನ ಸೆಳೆದು ಇದರ ಬಗ್ಗೆ ತುರ್ತು ಕ್ರಮ ಘೋಷಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ. ಎಂ. ಶಂಕರ ನಾಯಕ್ (ವೈದ್ಯಕೀಯ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಮೇಲ್ಮನೆಯಲ್ಲಿ ಸಾಕಷ್ಟು ಚರ್ಚೆಯಾಗಿದೆ. ಅವರು ಹೇಳತಕ್ಕಂಥ ಮ್ಯಾಥ್ಯುಸ್ ಸೋನಿ ಎಂಬ ರೋಗಿ ಫಿಟ್ಸ್ ರೋಗದಿಂದ ಆಸ್ಪತ್ರೆಗೆ ಬಂದಿದ್ದರು. ಅವರು ಖಾಯಿಲೆಯಾಗಿ ಬೀದರನಿಂದ ಬಂದಿರಲಿಲ್ಲ. ಅವರು ಬೆಂಗಳೂರಿಗೆ ಬಂದ ಮೇಲೆ ಫಿಟ್ಸ್ ಬಂತು. ಫಿಟ್ಸ್ ಬಂದ ಮೇಲೆ ಅವರು ವಿಕ್ಟೋರಿಯ ಆಸ್ಪತ್ರೆಗೆ ಹೋದರು. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ನೀವು ನಿಮ್ಹಾನ್ಸ್ ಆಸ್ಪತ್ರೆಗೆ ಹೋಗಿ ಚೆಕ್ ಮಾಡಿಸಿ ಎಂದು ಬರೆದು ಕೊಟ್ಟರು. ಹಾಗಾಗಿ ಅವರು ನಿಮಾನ್ಸ ಆಸ್ಪತ್ರೆಗೆ ಹೋದರು. ಅವರು ಕೂಲಂಕುಷವಾಗಿ ಪರಿಶೀಲಿಸಿ, ಫಿಟ್ಸ್ ಬಂದಿರುವುದು ಬೇರೆ ವಿಧಾನದಿಂದ, ಮಿದುಳು ಮಲೇರಿಯದಿಂದ ಇರಬಹುದು, ನೀವು ಮತ್ತೆ ಅಲ್ಲಿಗೆ ಹೋಗಿ ಅಡ್ಮಿಟ್ ಆಗಿ ಎಂದು ಹೇಳಿದರು. ಮತ್ತೆ ಅದೇ ರಾತ್ರಿ ಇಲ್ಲಿಗೆ ವಾಪಸ್ಸು ಬಂದು ಅಡ್ಮಿಟ್ ಆದರು. ಆದರೆ ಆತ ಅಡ್ಮಿಟ್ ಆದಮೇಲೆ ಅದಕ್ಕೆ ಬೇಕಾದಂತ ಚಿಕಿತ್ಸೆಯನ್ನು ಕೊಟ್ಟಿದ್ದಾರೆ. ನಾನು ಕೇಸ್‌ಷೀಟನ್ನು ತರಿಸಿ ನೋಡಿದ್ದೇನೆ. ಅವರು ಏನು ಮಾಡಿದ್ದಾರೆ ಅಂದರೆ ಯಾವಾಗ ಪೇಷಂಟ್‌ಗೆ ಟ್ರೀಟ್‌ಮೆಂಟ್ ಸರಿ ಹೋಗಲಿಲ್ಲ, ಪ್ರಜ್ಞೆ ತಪ್ಪಿದ್ದು ಪುನಃ ಪ್ರಜ್ಞೆ ಬರಲಿಲ್ಲ ಎಂದು ಡಾಕ್ಟರ್ ಅಡ್ವೈಸ್ ಪ್ರಕಾರ ಅಲ್ಲಿಂದ ಅವತ್ತು ಸಾಯಂಕಾಲ ಡಿಸ್‌ಚಾರ್ಜ್ ಮಾಡಿಸಿಕೊಂಡು ಕರೆದುಕೊಂಡು ಹೋಗಿದ್ದಾರೆ. ಅಷ್ಟು ಮಾತ್ರ ದಾಖಲೆ ನಮ್ಮ ಹತ್ತಿರ ಇದೆ. ಅವರು ಯಾವ ಆಸ್ಪತ್ರೆಗೆ ಹೋದರು, ಎಲ್ಲಿಗೆ ಹೋದರು, ಏನಾದರು ಎಂಬುದು ಇಲ್ಲ. ಆದರೂ ಸಹ ನಾನು ವಿಚಾರಣೆಗೆ ಒಂದು ಕಮಿಟಿ ಮಾಡಿ, ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಏನು ಚಿಕಿತ್ಸೆ ನೀಡಿದ್ದಾರೆ, ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ಯಾವ ವೈದ್ಯರು ನೋಡಿದರು ಅವರ ಅಭಿಪ್ರಾಯ ಏನು ಎನ್ನುವ ಬಗ್ಗೆ ನಡೆಸಿ ಮುಂದಿನ ಅಧಿವೇಶನದಲ್ಲಿ ವಿವರಣೆ ನೀಡುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಮೇಲ್ಮನೆಯಲ್ಲಿ ಕೊಟ್ಟ ಉತ್ತರವನ್ನು ನೋಡಿದ್ದೇನೆ. ವಿಕ್ಟೋರಿಯಾ ಆಸ್ಪತ್ರೆಯಿಂದ ಸಂಜೆ 6-25ಕ್ಕೆ ಬಿಟ್ಟು ನಿಮಾನ್ಸ್‌ಗೆ ಹೋಗಿ 7-50ಕ್ಕೆ ಮತ್ತೆ ವಿಕ್ಟೋರಿಯ ಆಸ್ಪತ್ರೆಗೆ ಬರುವುದಕ್ಕೆ ಸಾಧ್ಯವೆ? ಸಂಜೆ 6-25ರಲ್ಲಿ ವಿಕ್ಟೋರಿಯಾ ಆಸ್ಪತ್ರೆ ಬಿಟ್ಟ ಮೇಲೆ ನಿಮಾನ್ಸ್‌ಗೆ ಹೋಗಿದ್ದು ಅಲ್ಲಿ ಅವರು ಚಿಕಿತ್ಸೆ ಮಾಡಿ ಇದು ಮಲೇರಿಯ ಜ್ವರ ಎಂದು ವಾಪಸ್ಸು ಕಳುಹಿಸಿದ ಬಳಿಕ 7-50ಕ್ಕೆ ವಿಕ್ಟೋರಿಯಾ ಆಸ್ಪತ್ರೆಗೆ ಬರುವುದಕ್ಕೆ ಸಾಧ್ಯ ಇದೆಯೇ ಶನಿವಾರ ಸಂಜೆ ಆ ಪೀಕ ವೇಳೆಯಲ್ಲಿ ವಿಕ್ಟೋರಿಯದಿಂದ ನಿಮ್ಹಾನ್ಸ್‌ಗೆ ಹೋಗುವುದಕ್ಕೆ ಸಾಧ್ಯ ಇದೆಯೇ?

ಡಾ. ಎಂ. ಶಂಕರ್ ನಾಯಕ್ : ಸಮಯದಲ್ಲಿ ಸ್ವಲ್ಪ ವ್ಯತ್ಯಾಸವಾಗಿರಬಹುದು ಕೇಸ್ ಷೀಟ್‌ನಲ್ಲಿ ನಿಮ್ಹಾನ್ಸ್‌ನಲ್ಲಿ ಪರೀಕ್ಷೆ ಮಾಡಿದಂಥ ಎಲ್ಲಾ ದಾಖಲೆಗಳು ಇವೆ.

ಅಧ್ಯಕ್ಷರು : ಈ ವಿಚಾರದಲ್ಲಿ ನೀವು ಹೇಳತಕ್ಕಂಥದ್ದು ಸರಿ ಇರಬಹುದು, ಅವರು ಒಟ್ಟಾರೆ ಈ ವಿಚಾರವನ್ನು ಪ್ರಸ್ತಾಪ ಮಾಡುವ ಉದ್ದೇಶ ಏನೆಂದರೆ, ಸರ್ಕಾರದವರು ಬಡ ಜನರಿಗೆ ಅನುಕೂಲವಾಗಬೇಕೆಂದು ಕೋಟ್ಯಾಂತರ ರೂಪಾಯಿಗಳ ಬಂಡವಾಳ ಹಾಕುತ್ತಿದ್ದಾರೆ. ಆದರೆ ಅಲ್ಲಿ ಇರತಕ್ಕಂಥ ವೈದ್ಯರು ಸಾಕಷ್ಟು ಶ್ರದ್ಧೆಯಿಂದ ಕೆಲಸ ಮಾಡುತ್ತಿಲ್ಲ ಎಂಬುದನ್ನು ಸರ್ಕಾರದ ಗಮನಕ್ಕೆ ತರುವುದು ಅವರ ಉದ್ದೇಶ. ಅದರ ಕಡೆ ತಾವು ಗಮನ ಕೊಡಬೇಕು. ಏಕೆಂದರೆ ನಾನು 7-8 ತಿಂಗಳ ಕೆಳಗೆ ನನ್ನ ಕ್ಷೇತ್ರದಿಂದ ಒಂದು ಹೆಣ್ಣು ಮಗಳು ಸುಟ್ಟ ಗಾಯದಿಂದ she came to the Burns Centre. ಅಲ್ಲಿ ಹೆಡ್‌ಆಫ್ ದಿ ಡಿಪಾರ್ಟ್‌ಮೆಂಟ್‌ನವರು ಪ್ರೈವೇಟ್ ನರ್ಸಿಂಗ್ ಹೋಂ ಇದೆ ಅಲ್ಲಿಗೆ ಬನ್ನಿ ಎಂದು ಅವರಿಗೆ ಬಲವಂತ ಮಾಡಿ ಇಲ್ಲಿ ಸರಿ ಹೋಗುವುದಿಲ್ಲ, ನನ್ನ ನರ್ಸಿಂಗ್ ಹೋಂಗೆ ಬನ್ನಿ ಎಂದು ಹೇಳಿ ಅಲ್ಲಿ ಅಡ್ಮಿಟ್ ಮಾಡಿದರು. ಅವರನ್ನು ಅಲ್ಲಿ ನಾಲ್ಕು ದಿವಸ ಇಟ್ಟುಕೊಂಡು ಅವರಿಗೆ ಸುಮಾರು 30 ಸಾವಿರ ರೂಪಾಯಿ ಖರ್ಚು ಮಾಡಿಸಿಯಾದ ಆಮೇಲೆ ಇನ್ನು ಕೆಲವೇ ನಿಮಿಷಗಳಲ್ಲಿ ಸತ್ತು ಹೋಗುತ್ತಾನೆ ಎನ್ನುವಾಗ ಡಿಸ್‌ಚಾರ್ಜ್ ಮಾಡಿ ಸೆಂಟ್ ಜಾನ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ಹೇಳುತ್ತಾರೆ. and the patient died on the way to St. Johns. ಸೆಂಟ್‌ಜಾನ್ಸ್‌ಗೆ ಹೋಗುವ ದಾರಿಯಲ್ಲಿ ಸತ್ತು ಹೋದ ಮೇಲೆ ಹೆಣ ತಂದಿದ್ದೀರಿ, ನಾವು ಏನು ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದ್ದಾರೆ. ಅವರು ಹೆಣವನ್ನು ಊರಿಗೆ ತೆಗೆದುಕೊಂಡು ಹೋಗಬೇಕೆಂದು ಅವರು ಮೆಡಿಕಲ್ ಸರ್ಟಿಫಿಕೇಟ್ ಕೇಳಿದರೆ, ನಮ್ಮ ಆಸ್ಪತ್ರೆಯಲ್ಲಿ ಸತ್ತಿಲ್ಲ, ನಾವು ಕೊಡುವುದಿಲ್ಲ ಎಂದು ಹೇಳಿದರು. Then I had to intervene, and spoke to the Commissioner of police and got the Death Certificate. This sort of people are also there. Therefore, general defence may not be good. In this particular case the Government may be right. The general apprehension of the members is. ಅವರು ಸಾಕಷ್ಟು ಶ್ರದ್ಧೆಯಿಂದ ಕೆಲಸ ಮಾಡದಿದ್ದರೆ ಹೆಚ್ಚು ಮುತುವರ್ಜಿ ವಹಿಸದೆ ಆ ತರಹ ಅಲಕ್ಷ್ಯದಿಂದ ಯಾರು ಇರುತ್ತಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾದುದು ಸರ್ಕಾರದ ಜವಾಬ್ದಾರಿ.

ಶ್ರೀ ಬಿ.ಬಿ. ಶಿವಪ್ಪ : ಸನ್ಮಾನ್ಯ ಅಧ್ಯಕ್ಷರೆ, ನಿನ್ನೆ ಪತ್ರಿಕೆಯಲ್ಲಿ ಒಂದು ಫೋಟೋ ಬಂದಿದೆ ವಿಕ್ಟೋರಿಯ ಆಸ್ಪತ್ರೆ ಎದುರಿನಲ್ಲಿ, ಟ್ರೀಟ್‌ಮೆಂಟ್‌ಗೆ ಎಂದು ಹೋಗಿದ್ದ ಒಬ್ಬ ಹೆಂಗಸನ್ನು ವಾಪಸ್ಸು

ಕಳುಹಿಸಿದ ವರಂಡಾದಲ್ಲಿ. ಮಲಗಿಸಿದ್ದ ದೃಶ್ಯ. ಹಾಸನದಲ್ಲಿ ಕೂಡ ಇದೇ ರೀತಿ ಒಬ್ಬ ಹೆಂಗಸು ಸತ್ತು ನಾಲ್ಕು ದಿವಸ ಆದರೂ ಹೆಣ ಅಲ್ಲೇ ಇತ್ತು.

ಅಧ್ಯಕ್ಷರು : ಎಲ್ಲಾ ಕಡೆ ಆಗುತ್ತದೆ. ಈ ವ್ಯವಸ್ಥೆಯಲ್ಲಿ ಹಾಸನವೇನು, ಚಿಕ್ಕಮಗಳೂರು ಏನು, ಶ್ರೀನಿವಾಸಪುರ ಆದರೆ ಏನು?

ಡಾ. ಎಂ. ಶಂಕರ್ ನಾಯಕ್ : ನಾವು ಬಂದ ಮೇಲೆ ಸಾಕಷ್ಟು ನಿಗಾ ಮಹಿಸುತ್ತಾ ಇದ್ದೇವೆ. ಏನಾಗುತ್ತದೆ ಅಂದರೆ, ಬೇರೆ ಖಾಸಗಿ ನರ್ಸಿಂಗ್ ಹೋಂನಲ್ಲಿ ಇರುವ ಕೆಲವು ರೋಗಿಗಳು ಏನಾದರೂ ಸರಿಯಾಗಿದದ್ದರೆ ಅಂಥ ಸಂದರ್ಭದಲ್ಲಿ ಸರ್ಕಾರಿ ಆಸ್ಪತ್ರೆಗೆ ಕಳುಹಿಸುತ್ತಾರೆ. ತಕ್ಷಣ ಅವರು ಅಡ್ಮಿಟ್ ಮಾಡಿಕೊಂಡು ಚಿಕಿತ್ಸೆ ಮಾಡುವುದನ್ನು ಮಾಡುತ್ತಾರೆ. ಕೆಲವರು ಅಡ್‌ಮಿಷನ್ ಫಾರ್ಮಾಲಿಟಿಸ್ ಆಗುವ ಸಮಯದಲ್ಲೇ ಸಾಯುತ್ತಾರೆ.

ಅಧ್ಯಕ್ಷರು : ಸರ್ಕಾರಿ ಆಸ್ಪತ್ರೆಯಲ್ಲಿ ವ್ಯವಸ್ಥೆ ಸರಿಯಿಲ್ಲವೆಂದು ಹೇಳುತ್ತಾರೆ.

ಡಾ. ಎಂ. ಶಂಕರ್ ನಾಯಕ್ : ತಾವು ಹೇಳುವುದನ್ನು ನಾನು ಒಪ್ಪುತ್ತೇನೆ. ಸಾಕಷ್ಟು ವ್ಯವಸ್ಥೆಯಾಗಲಿ, ಡಾಕ್ಟರ್‌ಆಗಲಿ ನಾವು ಅಂದು ಕೊಂಡ ಮಟ್ಟದಲ್ಲಿ ಸರ್ಕಾರೀ ಆಸ್ಪತ್ರೆಗಳಲ್ಲಿ ಇಲ್ಲ. ಆದರೂ ಕೂಡ ಅದರ ಬಗ್ಗೆ ಏನು ಕ್ರಮ ಜರುಗಿಸಬಹುದು. ಏನು ಮಾಡಬಹುದು ಎಂದು ನಿಗಾ ಇಟ್ಟಿದ್ದೇವೆ.

12.00 ಪಿ.ಎಂ.

Mr. SPEAKER : That doctor shirks his duty towards the patient. He gives good-bye to the professional ethics, behaves like a traitor, develops vested interest, uses Government hospital to further his own practice.

ಶ್ರೀ ವಾಟಾಳ್ ನಾಗರಾಜ್ : ಸರ್ಕಾರಿ ಆಸ್ಪತ್ರೆಗಳು ಇಂದು ಯಮಲೋಕವಾಗಿವೆ. ಈ ಕೆ.ಆರ್. ಆಸ್ಪತ್ರೆ, ಬೌರಿಂಗ್ ಆಸ್ಪತ್ರೆ, ವಿಕ್ಟೋರಿಯಾ ಆಸ್ಪತ್ರೆಗಳಿಗೆ ಇಂದು ಯಾರಾದರೂ ರೋಗಿಗಳು ಹೋಗುವ ಸ್ಥಿತಿಯಲ್ಲಿವೆಯೇ? ಅಲ್ಲಿಯ ವಾಸನೆ, ಬೆಡ್ ವ್ಯವಸ್ಥೆ, ಇನ್ನಿತರ ವ್ಯವಸ್ಥೆಗಳನ್ನು ನೋಡಿದರೆ ಏನು ಇವು ಆಸ್ಪತ್ರೆಯೇ ಎಂದು ಕೊಳ್ಳುವ ಸ್ಥಿತಿ ಇದೆ. ಅಲ್ಲಿ ದಯೆಯಿಲ್ಲದ ನೀತಿಯನ್ನು ಅನುಸರಿಸುತ್ತಾರೆ. ಈ ರೀತಿಯ ವ್ಯವಸ್ಥೆ ಎಲ್ಲೂ ಇಲ್ಲ. ಯಾವ ದೇಶದಲ್ಲೂ ಈ ರೀತಿಯ ಪರಿಸ್ಥಿತಿ ಇಲ್ಲ.

ಶ್ರೀ ಹೆಚ್.ಎನ್. ನಂಜೇಗೌಡ : ಆ ಆಸ್ಪತ್ರೆಯಲ್ಲಿ ಸೂಪರಿಂಟೆಂಡೆಂಟ್ ಇರುತ್ತಾರಲ್ಲ Superintendents, they should make them accountable. Criminal irresponsibility. ಅಲ್ಲಿಗೆ ಹೋದ ರೋಗಿ ಯಾರ ಜೊತೆಯಲ್ಲಿ ತನ್ನ ರೋಗದ ಬಗ್ಗೆ ಹೇಳಿಕೊಳ್ಳಬೇಕು? ಈ ಆಸ್ಪತ್ರೆಗಳು ಇರುವುದೇ ಬಡವರಿಗಾಗಿ, ಇಲ್ಲದೇ ಹೋದರೆ ಸರ್ಕಾರ ಇವುಗಳಿಗೇಕೆ ದುಡ್ಡು ಖರ್ಚು ಮಾಡಬೇಕು? ಆ ಆಸ್ಪತ್ರೆಗಳಲ್ಲಿ ಔಷಧಿ ಕೊಡುವ ವ್ಯವಸ್ಥೆಯನ್ನು ನೋಡಿದರೆ ನಮಗೆ ಗೊತ್ತಾಗುತ್ತದೆ. ಈಗ

ಇ.ಎಸ್.ಐ. ಆಸ್ಪತ್ರೆಯಲ್ಲಿ ಔಷಧಿ ಕೊಡುತ್ತಾರಲ್ಲ, 1½ ಕೋಟಿ ರೂ.ಗಳ ಔಷಧಿಗಳು ಔಟ್ ಡೇಟೆಡ್ ಆಗಿವೆ. ಔಷಧಿ ಇಲ್ಲ ಆಸ್ಪತ್ರೆಯಲ್ಲಿ ಎಂದು ಕೇಳುತ್ತಾರೆ, ಇವರು ಕೊಡುವುದಿಲ್ಲ. ಇದು ಎಲ್ಲಿಯವರೆಗೆ? ಇದರ ಬಗ್ಗೆ ಅಕೌಂಟಬಿಲಿಟಿ ಕೇಳಬೇಕು. ಈ ಬಗ್ಗೆ ನನ್ನ ಸಲಹೆ ಏನೆಂದರೆ ತಾವು ದಯಮಾಡಿ ದೊಡ್ಡ ದೊಡ್ಡ ಆಸ್ಪತ್ರೆಗಳು ಯಾವುವಿವೆ, ಅವುಗಳಿಗೆ ಒಂದು ವಾರಕ್ಕೊಮ್ಮೆ ನೀವು ಯಾರಿಗೂ ಹೇಳದೇ ಸುಮ್ಮನೇ ಭೇಟಿ ಕೊಟ್ಟು ಅಲ್ಲಿಯ ಪರಿಸ್ಥಿತಿ ಬಗ್ಗೆ ಅಬ್ಸರ್ವ್ ಮಾಡಿ. ಈಗ ಏನು ಮಾಡುವುದು ಏನ್ನುವುದೇ ಅರ್ಥವಾಗುವುದಿಲ್ಲ. Nobody is accountable in the Government hospitals. You make them accountable.

ಶ್ರೀ ಚಿಂದ್ರಕಾಂತ್ ಸಿ. ಬೆಲ್ಲದ್ : ಧಾರವಾಡದಲ್ಲಿರುವ ಸಿವಿಲ್ ಆಸ್ಪತ್ರೆಯಲ್ಲಿ ವಿಸಿಟರ್ಸ್ ಬೋರ್ಡ್‌ನ್ನು ಕಳೆದ 2 ವರ್ಷಗಳಿಂದಲೂ ಮಾಡಿಲ್ಲ. ಅಲ್ಲಿ ಶಾಸಕರು ಇದ್ದ ವಿಸಿಟರ್ಸ್ ಬೋರ್ಡ್ ಇದ್ದರೆ, ಏನಾದರೂ ಕೆಲಸ ಸ್ವಲ್ಪ ಚೆನ್ನಾಗಿ ನಡೆಯುತ್ತದೆ.

ಅಧ್ಯಕ್ಷರು : ವಿಸಿಟರ್ಸ್ ಬೋರ್ಡ್ ಬಗ್ಗೆ ತಮಗೆಲ್ಲಾ ಗೊತ್ತೇ ಇದೆ. ಅಲ್ಲೂ ಕೂಡ ಬೇರೆ ಬೇರೆ ಕೆಲಸಗಳನ್ನು ಮಾಡುತ್ತಾರೆ. ಅದೂ ಕೂಡ ಸಮಸ್ಯೆಯೇ. ಎಲ್ಲದಕ್ಕೂ ಕೂಡ ಪ್ರಾಬ್ಲಮ್ ಇದೆ.

(ಖಂ) ಬಿಜಾಪುರ ಜಿಲ್ಲೆಯ ಜಂಬಗಿ ಕೆರೆಯಲ್ಲಿ ಅತಿವೃಷ್ಟಿಯಿಂದ ಕೊಚ್ಚಿಕೊಂಡು ಹೋಗುತ್ತಿದ್ದ ವ್ಯಕ್ತಿಯನ್ನು ಉಳಿಸಲಿಕ್ಕೆ ಹೋದ ಹುಡುಗ ಸಾವನ್ನಪ್ಪಿದ್ದು ಈತನ ವಾರಸುದಾರರಿಗೆ ಇನ್ನೂ ಪರಿಹಾರ ಧನ ಕೊಡದಿರುವ ಬಗ್ಗೆ.

ಶ್ರೀ ಎಸ್. ಶಿವಾನಂದ ಪಾಟೀಲ್ (ತಿಕೋಟಾ) : ಮಾನ್ಯ ಅಧ್ಯಕ್ಷರೇ, ದಿನಾಂಕ 12-09-96ರಂದು ಬಿಜಾಪುರ ಜಿಲ್ಲೆಯಲ್ಲಿ ತುಂಬಾ ಅತಿವೃಷ್ಟಿಯಾಯಿತು. ಆ ಸಂದರ್ಭದಲ್ಲಿ ಬಿಜಾಪುರ ತಾಲ್ಲೂಕಿನ ಜಂಬಗಿ ಕೆರೆಯಲ್ಲಿ ಬಸಪ್ಪ ಎನ್ನುವವನು ಕೊಚ್ಚಿಕೊಂಡು ಹೋದ. ಆದೇ ಸಂದರ್ಭದಲ್ಲಿ ಅಣ್ಣಾ ಸಾಹೇಬ್ ಲೋಗಾಯಿ ಎನ್ನುವವನು ಆತನನ್ನು ಉಳಿಸುವುದಕ್ಕೆ ಹೋಗಿ, ಅವನೂ ಕೂಡ ಕೆರೆಯಲ್ಲಿ ಕೊಚ್ಚಿಕೊಂಡು ಹೋದ. ಮೊದಲು ತೀರಿಕೊಂಡ ಹುಡುಗನಿಗೆ ಸಂಬಂಧಪಟ್ಟಂತೆ ಪರಿಹಾರ ಧನವನ್ನು ಜಿಲ್ಲಾಧಿಕಾರಿಯವರು ಪರಿಹಾರ ನಿಧಿಯಿಂದ ಕೊಟ್ಟಿದ್ದಾರೆ. ಆದರೆ ಆತನನ್ನು ಉಳಿಸುವುದಕ್ಕೆ ಹೋದ ಲೋಗಾಯಿ ವಾರಸುದಾರರಿಗೆ ಇದುವರೆಗೆ ಪರಿಹಾರ ಧನವನ್ನು ಕೊಟ್ಟಿಲ್ಲ. ಈಗಗಾಲೇ 6ತಿಂಗಳುಗಳಾಗಿದೆ. ಈ ಪರಿಹಾರ ಧನವನ್ನು ಕೊಡುವುದರಲ್ಲಿ ಏನಾದರೂ ತಾರತಮ್ಯವಿದೆಯೇ? ಈಗ ಇರುವ ಆತನ ತಂಗಿಯೇ ವಾರಸುದಾರಳು ಎಂಬುವುದಕ್ಕೆ ಕೋರ್ಟನಲ್ಲಿ ಅಫಿಡೆವಿಟ್ ಮಾಡಿ ಅದನ್ನು ಪ್ರೂವ್ ಮಾಡಿ ಅದಕ್ಕೆ ಸಂಬಂಧಪಟ್ಟಂತೆ ಜಿಲ್ಲಾಧಿಕಾರಿಗಳು ದಾಖಲಾತಿಯನ್ನು ಕೂಡ ಕೊಟ್ಟಿದ್ದಾರೆ. ಆದುದರಿಂದ ದಯಮಾಡಿ ಸರ್ಕಾರದವರು ಇದನ್ನು ತೀವ್ರವಾಗಿ ಗಣನೆಗೆ ತೆಗೆದುಕೊಂಡು ಪರಿಹಾರ ಧನವನ್ನು ಕೊಡಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಕೇಳಲು ಇಚ್ಛಿಪಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಸದನದ ಮುಖಾಂತರ ಈ ವಿಷಯವನ್ನು ಸರ್ಕಾರದ ಗಮನಕ್ಕೆ ಏನು

ತಂದಿದ್ದಾರೆ, ಇದರ ಬಗ್ಗೆ ಕಂದಾಯ ಮಂತ್ರಿಗಳ ಜೊತೆ ಮಾತನಾಡಿ ಈ ದಿವಸವೇ ಈ ವಿಷಯದ ಬಗ್ಗೆ ವಸ್ತು ಸ್ಥಿತಿಯನ್ನು ತರಿಸಿಕೊಂಡು ಪರಿಹಾರ ಕೊಡುವಂಥ ಎಲ್ಲಾ ಕ್ರಮಗಳನ್ನು ಕೈಗೊಳ್ಳುತ್ತೇನೆ.

(ಖೂ) ಧಾರವಾಡ ಜಿಲ್ಲೆಯಲ್ಲಿ ಗ್ರಾಮ ವ್ಯವಸಾಯ ಸೇವಾ ಸಹಕಾರ ಸಂಘಗಳನ್ನು ಪುನರ್ವಿಂಗಡಣೆ ಮಾಡುವಾಗ ವಿರೋಧ ಪಕ್ಷದ ಶಾಸಕರ ಜೊತೆ ಸಮಾಲೋಚನೆ.

ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಅಧ್ಯಕ್ಷರೇ, ಧಾರವಾಡ ಜಿಲ್ಲೆಯಲ್ಲಿ ಗ್ರಾಮ ವ್ಯವಸಾಯ ಸೇವಾ ಸಹಕಾರ ಸಂಘಗಳನ್ನು ಪುನರ್ವಿಂಗಡಣೆ ಮಾಡಿ ನಾಮಕರಣ ಮಾಡುವುದಕ್ಕಾಗಿ ಉಪ ನಿಬಂಧಕರಿಗೆ ಸರ್ಕಾರ ಸುತ್ತೋಲೆಯನ್ನು ಹೊರಡಿಸಿದೆಯೆಂದು ತಿಳಿದುಬಂದಿದೆ. ಆದರೆ ಅಲ್ಲಿಯ ಉಪ ನಿಬಂಧಕರು ಯಾವುದೇ ವಿರೋಧ ಪಕ್ಷದ ಶಾಸಕರನ್ನು ಇದರ ಬಗ್ಗೆ ವಿಚಾರ ಮಾಡದೇ ಕೇವಲ ಜನತಾ ದಳದವರನ್ನು ಮಾತ್ರ ಕರೆದು ಇದರ ಬಗ್ಗೆ ವಿಚಾರ ಮಾಡಿ ನಾಮಕರಣ ಮಾಡುವಂಥ ಕ್ರಮವನ್ನು ತೆಗೆದುಕೊಂಡಿದ್ದಾರೆಂದು ತಿಳಿದುಬಂದಿದೆ. ಈ ಬಗ್ಗೆ ಮಾನ್ಯ ಸಹಕಾರ ಸಚಿವರಿಗೆ ನಾನು ಕೇಳುವುದೇನೆಂದರೆ ವಿರೋಧ ಪಕ್ಷದ ಶಾಸಕರನ್ನು ತಾಲ್ಲೂಕಿನಲ್ಲಿರುವ ಗ್ರಾಮ ವ್ಯವಸಾಯ ಸೇವಾ ಸಹಕಾರ ಸಂಘಗಳನ್ನು ಪುನರ್ವಿಂಗಡಣೆ ಮಾಡುವಾಗ ಇದರ ಬಗ್ಗೆ ಸಮಾಲೋಚನೆ ಮಾಡುವುದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಸುಮಾರು ಮೂರ್ನಾಲ್ಕು ವರ್ಷಗಳ ಹಿಂದೆ ನಮ್ಮ ಜಿಲ್ಲೆಯಲ್ಲಿ ಪುನರ್ವಿಂಗಡಣೆಯಾಗಿತು. ಈಗ ಮತ್ತೆ ಮಾನ್ಯ ಸಹಕಾರ ಸಚಿವರು ಮತ್ತೆ ಪುನರ್ವಿಂಗಡಣೆ ಮಾಡಬೇಕೆಂದು ಇಚ್ಛಿಪಟ್ಟಿದ್ದಾರೆ. ಈ ಹಿಂದೆ ಮೂರ್ನಾಲ್ಕು ವರ್ಷಗಳ ಹಿಂದೆ ಪುನರ್ವಿಂಗಡಣೆ ಮಾಡಿದಾಗ, ಅಲ್ಲಿ ಯಾರ್ಯಾರು ಶಾಸಕರಿದ್ದರೋ ಅವರನ್ನು ಕೇಳಿಯೇ ಮಾಡಲಾಗಿತ್ತು. ವಿರೋಧ ಪಕ್ಷದ ಶಾಸಕರನ್ನು ಕೂಡ ಕೇಳಿ ಮಾಡಲಾಗಿತ್ತು. ಆದರೆ ಈ ಬಾರಿ ವಿರೋಧ ಪಕ್ಷದ ಶಾಸಕರನ್ನು ಯಾರನ್ನೂ ಕೇಳಬಾರದು ಎಂದು ಮಾನ್ಯ ಸಚಿವರು ಮೌಖಿಕ ಆದೇಶವನ್ನು ಅಧಿಕಾರಿಗಳಿಗೆ ಕೊಟ್ಟಿದ್ದಾರೆ. ಈಗ ಸಚಿವರು ಮಾಡುವುದಿರಲಿ ಅಥವಾ ಮುಖ್ಯಮಂತ್ರಿಗಳು ಮಾಡುವುದಿರಲಿ ಆಗ ಅವರು ತಮಗೆ ತಿಳಿದ ಹಾಗೆ ಮಾಡಲಿ. ಆದರೆ ಸರ್ಕಾರಿ ಅಧಿಕಾರಿಗಳು ನಾಮಕರಣ ಮಾಡುವುದರಿಂದ ಅವರು ಒಂದು ಪದ್ಧತಿಯನ್ನು ಫಾಲೋ ಮಾಡಬೇಕಾಗುತ್ತದೆ. ಅವರು ಒಂದು ಪಕ್ಷದ ಏಜೆಂಟ್ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಅವಕಾಶವಿಲ್ಲ. ಕಾನೂನಿನಲ್ಲಿ ಡೆಪ್ಯುಟಿ ರಿಜಿಸ್ಟ್ರಾರವರೇ ನಾಮಕರಣ ಮಾಡಬೇಕೆಂದು ಇದೆ. ಇವರು ಅಲ್ಲಿಯ ಜನ ಪ್ರತಿನಿಧಿಗಳನ್ನು ಕೇಳಿಯೇ ಮಾಡಬೇಕು. ಇಲ್ಲದಿದ್ದರೆ ಅಲ್ಲಿರುವ ಜನರಲ್ ಬಾಡಿ ಮೆಂಬರ್ಸ್‌ಗಳ ಅಭಿಪ್ರಾಯವನ್ನು ಪಡೆದು ಅದರಂತೆ ಮಾಡಬೇಕು. ಆ ರೀತಿಯಾದರೂ ಮಾಡಿಸಲಿ.

ಶ್ರೀ ಪಿ. ಸಿ. ಸಿದ್ದನಗೌಡರ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಪಾಟೀಲರವರು ಹೇಳಿದ ಹಾಗೆ ಹಿಂದೆ ಇವ್ವತ್ತಿನ ವಿರೋಧ ಪಕ್ಷದ ನಾಯಕರಾದ ಮಾನ್ಯ ಬಿರ್ಗಯವರೂ ಕೂಡ ಕೋ-ಆಪರೇಟಿವ್ ಮಿನಿಸ್ಟರ್ ಆಗಿದ್ದರು. ಮಾನ್ಯ ಹೆಚ್.ಕೆ. ಪಾಟೀಲ್‌ರವರು ಇವ್ವಾಗ ನಮ್ಮ ಧಾರವಾಡ ಜಿಲ್ಲೆಯಲ್ಲಿ ಸಹಕಾರ ಸಂಘಗಳನ್ನು ಪುನರ್ವಿಂಗಡಣೆ ಮಾಡುವಾಗ ಅಥವಾ ಬೇರೆ ವಿಚಾರಗಳಲ್ಲಿ ಸಹಕಾರ ಸಂಘಗಳ ಬಗ್ಗೆ ಚರ್ಚೆ ಮಾಡಿರುವುದು ನಿಜ. ಆದರೆ ಶಹರದಲ್ಲಿರತಕ್ಕಂಥ ಕೋ-ಆಪರೇಟಿವ್

ಸೊಸೈಟಿ, ರೂರಲ್‌ನಲ್ಲಿ ಬರತಕ್ಕಂಥ ಕೋ-ಆಪರೇಟಿವ್ ಸೊಸೈಟಿ ಅಮಾಲಗಮೇಶನ್ ಮಾಡತಕ್ಕಂಥ ಸಂದರ್ಭದಲ್ಲಿ ಜಿಲ್ಲಾ ಪರಿಷತ್ ವ್ಯಾಪ್ತಿಯಲ್ಲಿ ಬರತಕ್ಕಂಥ ವ್ಯವಸ್ಥೆ ಮತ್ತು ಕಾರ್ಪೊರೇಶನಲ್ಲಿ ಬರತಕ್ಕಂಥ ವ್ಯವಸ್ಥೆ ಬೇರೆ ಬೇರೆಯಾಗಿರುತ್ತದೆ. ಆದುದರಿಂದ ಸರ್ಕಾರ ಇದನ್ನು ಮಾಡುವುದಕ್ಕಿಂತ ಪೂರ್ವದಲ್ಲಿ ಇದರಲ್ಲಿ ಎಲ್ಲಾ ಶಾಸಕರನ್ನು ಕರೆದು ಆ ಗ್ರಾಮ ಸಹಕಾರ ಸಂಘದ ವ್ಯವಸ್ಥೆಯನ್ನು ತಿಳಿದುಕೊಂಡು ನಂತರ ಪುನರ್ವಿಂಗಡಣೆ ಮಾಡುವುದು ಸೂಕ್ತವೆಂದು ನನ್ನ ಅಭಿಪ್ರಾಯವಾಗಿದೆ. ಆದುದರಿಂದ ಮಾನ್ಯ ಸಚಿವರು ಈ ವಿಚಾರವನ್ನು ಪುನರ ಪರಿಶೀಲಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಶಾಸಕರಾದಂಥ ಡಿ.ಆರ್. ಪಾಟೀಲ್‌ರವರು ಹೇಳಿದ ಹಾಗೆ ಈ ಹಿಂದೆ ಧಾರವಾಡ ಜಿಲ್ಲೆಯಲ್ಲಿ ಈ ಸಹಕಾರ ಸಂಘಗಳನ್ನು ಅಮಾಲಗಮೇಶನ್ ಮಾಡಿ ಅಲ್ಲಿ ಅವರು ಕೋರ್ಟಿಗೆ ಹೋಗಿ ಸ್ಟೇ ಆಗಿ ಅದು ಇನ್ನೂ ಕೆಲವು ಹಂತಗಳಲ್ಲಿ ಹಾಗೆಯೇ ಉಳಿದಿದೆ. ನಮ್ಮ ಸರ್ಕಾರ ಬಂದ ಮೇಲೆ ನಾವು ಪ್ರತಿ ಪಂಚಾಯತಿಗೆ ಒಂದು ಸಹಕಾರ ಸಂಘವನ್ನು ಮಾಡಬೇಕೆಂದು ತೀರ್ಮಾನ ತೆಗೆದುಕೊಂಡಿರುವುದರಿಂದ, ಈ ಸಹಕಾರ ಸಂಘಗಳನ್ನೆಲ್ಲಾ ನಾವು ಒಟ್ಟುಗೂಡಿಸಿ ಆ ಸಹಕಾರ ಸಂಘಗಳಿಗೆ ನಾಮಕರಣ ಮಾಡುವುದಕ್ಕೆ ನಮ್ಮ ಡೆಪ್ಯುಟಿ ರಿಜಿಸ್ಟ್ರಾರ್‌ರವರಿಗೆ ತಿಳಿಸಿದ್ದೇವೆ. ಬಹುಶಃ ಡೆಪ್ಯುಟಿ ರಿಜಿಸ್ಟ್ರಾರ್‌ರವರು ಆ ರೀತಿಯಾಗಿ ಕೆಲಸ ಮಾಡುತ್ತಿದ್ದಾರೆ. ಅಲ್ಲಿ ಯಾರನ್ನೂ ಕೇಳಿ ಮಾಡುವಂಥ ಪ್ರಶ್ನೆ ಬರುವುದಿಲ್ಲ.

ಶ್ರೀ ಯು. ಬಿ. ಬಣಕಾರ್ : ಮಾನ್ಯ ಅಧ್ಯಕ್ಷರೇ, ಅವರು ಜನತಾ ದಳದ ಶಾಸಕರನ್ನು ಮಾತ್ರ ಕೇಳಿ ನಾಮಕರಣ ಮಾಡುತ್ತಿದ್ದಾರೆ. ವಿರೋಧ ಪಕ್ಷದ ಶಾಸಕರನ್ನು ಯಾರನ್ನೂ ಕೇಳುತ್ತಿಲ್ಲ. ಸರ್ಕಾರ ನಾಮಕರಣ ಮಾಡಿದರೆ ಮಾಡಲಿ ಅದರಲ್ಲಿ ನನ್ನದೂ ಯಾವ ತಕರಾರು ಇಲ್ಲ. ಆದರೆ ಒಬ್ಬ ಜಿಲ್ಲೆಯ ಅಧಿಕಾರಿ ಜನತಾದಳದ ಕಾರ್ಯಕರ್ತರನ್ನು ನಾಮಕರಣ ಮಾಡುವುದಕ್ಕೆ ಅವಕಾಶವಿಲ್ಲ. ಈ ಹಿಂದೆ ಇದ್ದಂಥ ಕಾಂಗ್ರೆಸ್ ಸರ್ಕಾರ ನಮ್ಮ ತಾಲ್ಲೂಕಿನ ಜನತಾ ದಳದ ಶಾಸಕರಿಗೆ ಅವಕಾಶವನ್ನು ಕೊಟ್ಟಿದೆ. ಆದರೆ ಇವರು ಕಾಂಗ್ರೆಸ್‌ನವರಿಗಿಂತ ನಮ್ಮದು ಮೌಲ್ಯಾಧಾರಿತ ಸರ್ಕಾರ ಎಂದು ಹೇಳುತ್ತಿರುವಾಗ ಈ ವಿಷಯದಲ್ಲಿ ಹಿಂದೆ ಕಾಂಗ್ರೆಸ್ ಸರ್ಕಾರ ಮಾಡಿದ ಹಾಗೆ ಕೂಡ ಮಾಡಿಲ್ಲ.

ಅಧ್ಯಕ್ಷರು : ಈಗ ಯಾವುದೇ ಪಕ್ಷಕ್ಕೂ ಸೇರಿದವರನ್ನು ನಾಮಿನೇಟ ಮಾಡಬೇಕೆಂದರೆ ಎಲ್ಲಾ ಸೊಸೈಟಿಗಳಿಗೂ ನನ್ನನ್ನೇ ನಾಮಿನೇಟ್ ಮಾಡಬೇಕಾಗುತ್ತದೆ. ಏಕೆಂದರೆ ಈಗ ನಾನು ಯಾವುದೇ ಪಕ್ಷಕ್ಕೂ ಸೇರಿದವನಲ್ಲ.

ಶ್ರೀ ವೈ. ರಾಮಕೃಷ್ಣ : ಆ ಕ್ಷೇತ್ರದಲ್ಲಿ ಪರಿಣಿತರಾದವರು ಅದೇ ಕ್ಷೇತ್ರದಲ್ಲಿ ಸಿಕ್ಕಿದರೆ ಮಾಡಿ. ಪೂರ್ಣವಾಗಿ ರಾಜಕೀಯ ವ್ಯಕ್ತಿಗಳನ್ನು ಕನ್ಸಿಡರೇಶನ್ ಮಾಡಬೇಡಿ ಎಂದು ಅವರು ಹೇಳುತ್ತಿದ್ದಾರೆ.

ಅಧ್ಯಕ್ಷರು : ಹೌದು.

ಶ್ರೀ ಯು. ಬಿ. ಬಣಕಾರ್ : ಧಾರವಾಡ ಜಿಲ್ಲೆಯ ಉಪ ನಿಬಂಧಕರು ವಿರೋಧ ಪಕ್ಷದ ಶಾಸಕರನ್ನು ಕರೆದು ಚರ್ಚಿಸಿ ನಾಮಕರಣ ಮಾಡುವುದಿಲ್ಲ ಎಂದರೆ ಹೇಗೆ? ಮಾನ್ಯ ಸಹಕಾರ ಸಚಿವರೇ ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರಾಗಿದ್ದಾರೆ. ನಾಮಕರಣ ಅವರ ಕಡೆಯವರನ್ನೇ

ಮಾಡಲಿ, ಕೊನೆಯ ಪಕ್ಷ ಜಿಲ್ಲೆಯ ಅಧಿಕಾರಿಗಳು ಶಾಸಕರನ್ನು ಕರೆಯುವ ಸೌಜನ್ಯವನ್ನಾದರೂ ತೋರಿಸದಿದ್ದರೆ ಹೇಗೆ?

ಶ್ರೀ ಎಸ್.ಎಸ್. ಪಾಟೀಲ್ : ಆ ಅಧಿಕಾರವನ್ನು ಡೆಪ್ಯುಟಿ ರಿಜಿಸ್ಟ್ರಾರರವರಿಗೆ ಕೊಟ್ಟಿದ್ದೇವೆ. ಅವರು ಅಲ್ಲಿರತಕ್ಕಂಥ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ನಾಮಕರಣ ಮಾಡುತ್ತಾರೆ.

ಶ್ರೀ ಡಿ.ಆರ್. ಪಾಟೀಲ್ : ಬಹಳ ಸಂತೋಷ. ಆದರೆ ಡೆಪ್ಯುಟಿ ರಿಜಿಸ್ಟ್ರಾರ್‌ರವರಿಗೆ ಇವರು ಅಧಿಕಾರ ಕೊಟ್ಟಿಲ್ಲ. ಕಾನೂನು ಅಧಿಕಾರ ಕೊಟ್ಟಿದೆ. ಡೆಪ್ಯುಟಿ ರಿಜಿಸ್ಟ್ರಾರ್‌ರವರು ನಿಷ್ಪಕ್ಷಪಾತವಾಗಿ ಮಾಡಿದರೆ ಒಳ್ಳೆಯದು ಮತ್ತು ಬಹಳ ಸಂತೋಷ. ಒಂದು ವೇಳೆ ಅವರಿಂದ ಅನ್ಯಾಯವಾಯಿತು ಎಂದರೆ, ಅವರು ಒಂದು ಪಕ್ಷದ ಏಜೆಂಟ್‌ರಾಗಿ ಕೆಲಸ ಮಾಡಿದರೆ ಆಗ ನಾವು ನಮ್ಮ ರಕ್ಷಣೆಗಾಗಿ ನಿಮ್ಮ ಬಳಿ ಬರುತ್ತೇನೆ.

ಮಾನ್ಯ ಸದಸ್ಯರು : ಈ ಹಿಂದಿನ ಸರ್ಕಾರವಿದ್ದಾಗ ಏನು ಮಾಡುತ್ತಿದ್ದರೆಂದರೆ, ಮಂಡಲ ಪಂಚಾಯತಿಯನ್ನು, ಗ್ರಾಮ ಪಂಚಾಯತಿಗಳನ್ನು, ತಾಲ್ಲೂಕು ಪಂಚಾಯತಿ ಸಂಸ್ಥೆಗಳನ್ನು ವಿಂಗಡಣೆ ಮಾಡಿದರು. ಆಗ ಇದು ಅವರ ಜ್ಞಾಪಕಕ್ಕೆ ಬರಲಿಲ್ಲ. ಇದಾದಮೇಲೆ ಕೋ-ಅಪರೇಟಿವ್ ಡಿಪಾರ್ಟ್‌ಮೆಂಟಿನಲ್ಲಿ ನಾಮಿನೇಟ್ ಮಾಡಿದರು. ಆಗ ಅವರಿಗೆ ಇದು ಜ್ಞಾಪಕ ಇರಲಿಲ್ಲ. ಅದೇ ರೀತಿಯಲ್ಲಿ ಆಶ್ರಯ ಸಮಿತಿಗಳಿಗೆ ನಾಮಿನೇಟ್ ಮಾಡಿದರು. ಅವೊತ್ತು ಈ ವಿಚಾರ ಜ್ಞಾಪಕವಿರಲಿಲ್ಲ. ಸರ್ಕಾರ ನಾಮಿನೇಷನ್ ಮಾಡುವಾಗ, ತಮ್ಮ ಪಕ್ಷದವರಿಗೆ ನಾಮಿನೇಷನ್ ಮಾಡುತ್ತದೆ. ಅಧಿಕಾರಿ ನಾಮಿನೇಶನ್ ಮಾಡುವಾಗ ನಾವು ಹಿಂದೆ ಅಮಾಲ್ಗಮೇಷನ್ ಮಾಡಿದಾಗ ಸ್ಥಳೀಯ ಶಾಸಕರಿಗೂ ಕೇಳಿ, ಶಾಸಕರು ಏನು ಪಟ್ಟಿ ಕೊಟ್ಟಿದ್ದಾರೆ, ಅದನ್ನು ಮಾಡಿದ್ದಾರೆ.

(ಎ) ಹಾಸನದಲ್ಲಿ ಮಹಿಳಾ ಸಹಕಾರಿ ಬ್ಯಾಂಕ್

ಶ್ರೀ ಬಿ. ಶಿವರಾಮ (ಗಂಡಸಿ) : ಮಾನ್ಯ ಅಧ್ಯಕ್ಷರೆ, ಹಾಸನದಲ್ಲಿ ಮಹಿಳಾ ಸಹಕಾರಿ ಬ್ಯಾಂಕನ್ನು ಮಾಡತಕ್ಕಂತಹ ವಿಚಾರದಲ್ಲಿ ರಿಸರ್ವ್ ಬ್ಯಾಂಕಿನ ಆದೇಶದಂತೆ 18 ಲಕ್ಷ ರೂಪಾಯಿಗಳ ಹಣವನ್ನು ಸಂಗ್ರಹ ಮಾಡಿ ಬಹುಶಃ ಐದು ತಿಂಗಳು ಆಗಿದೆ ಎಂದು ನಾನು ತಿಳಿದಿದ್ದೇನೆ. ಇಲ್ಲಿಯವರೆಗೆ ಅದು ಸರ್ಕಾರಕ್ಕೆ ಬಂದು ರಿಜಿಸ್ಟ್ರಾರ್‌ಆಗಿಲ್ಲ. ಇದಕ್ಕೆ ಕಾರಣ ಏನು ಗೊತ್ತಿಲ್ಲ. ಸಚಿವರು ಇಲ್ಲಿದ್ದಾರೆ, ಈಗ ಆ ಪ್ರಸ್ತಾವನೆ ಬಂದಿದೆಯೋ ಇಲ್ಲವೋ ಅದು ಗೊತ್ತಿಲ್ಲ. ಬಹುಶಃ ಬಂದಿರಬಹುದು ಎಂದು ನಾನು ಭಾವಿಸಿದ್ದೇನೆ. ಇಷ್ಟು ದಿನ ವಿಳಂಬ ಆಗುವುದಕ್ಕೆ ಕಾರಣ ಏನು? ಏಕೆಂದರೆ, ಪ್ರಧಾನ ಮಂತ್ರಿಗಳು ಮಹಿಳಾ ಬ್ಯಾಂಕುಗಳಿಗೆ ಹೆಚ್ಚು ಆದ್ಯತೆ ಕೊಡುತ್ತೇವೆ ಸಹಕಾರಿ ಬ್ಯಾಂಕುಗಳಿಗೆ ಹೆಚ್ಚು ಆದ್ಯತೆ ಕೊಡುತ್ತೇವೆಂದು ಹೇಳಿದ್ದಾರೆ. ರಾಜ್ಯಪಾಲರ ಭಾಷಣದಲ್ಲಿ ಕೂಡ ಹೇಳಿದ್ದಾರೆ. ನಮ್ಮ ಜಿಲ್ಲೆ ಬ್ಯಾಂಕುಗಳಿಗೆ ಐದು ತಿಂಗಳು ಕಳೆದರೂ ರಿಜಿಸ್ಟ್ರೇಷನ್ ಆಗಿಲ್ಲ. ಇದು ಇಷ್ಟು ವಿಳಂಬವಾಗುವುದಕ್ಕೆ ಏನಾದರೂ ಮೂಲಭೂತ ಕಾರಣ ಇರಬಹುದು. ಇದಕ್ಕೆ ಮಂತ್ರಿಗಳಿಂದ ಉತ್ತರ ಬಯಸುತ್ತೇನೆ.

ಶ್ರೀ ಎಸ್. ಎಸ್. ಪಾಟೀಲ್ (ಸಹಕಾರ ಸಚಿವರು) : ಸನ್ಮಾನ್ಯ ಸಭಾಧ್ಯಕ್ಷರೆ, ಬಹುಶಃ ಮಾನ್ಯ ಶಾಸಕರು ಹೇಳಿದ ಹಾಗೆ ನಾವೂ ಕೂಡ ಮಹಿಳಾ ಬ್ಯಾಂಕುಗಳಿಗೆ ಉತ್ತೇಜನ ಕೊಡುತ್ತಿದ್ದೇವೆ. ಯಾರು

ಮುಂದೆ ಬಂದರೂ ಮಾಡುತ್ತಿದ್ದೇವೆ. ಇದು ಯಾವ ಕಾರಣಕ್ಕಾಗಿ ನಿಂತಿದಿಯೋ ಗೊತ್ತಿಲ್ಲ, ಅದು ಸರ್ಕಾರಕ್ಕೆ ಬರುವುದಿಲ್ಲ; ರಿಜಿಸ್ಟ್ರಾರ್ ಲೆವಲ್‌ನಲ್ಲಿ ಮಾಡುತ್ತಾರೆ. ಖಂಡಿತವಾಗಿಯೂ ಅದನ್ನು ಮಾಡಿ ಕೊಡುತ್ತೇವೆ.

ಶ್ರೀ ಬಿ. ಶಿವರಾಮ್ : ವಿಳಂಬ ಏಕೆ ಆಗಿದೆ? ಐದು ತಿಂಗಳ ಹಿಂದೆ ರಿಸರ್ವ್ ಬ್ಯಾಂಕಿನಲ್ಲಿ ಸ್ಯಾಂಕ್ಷನ್ ಆದರೂ, ಯಾವ ಕಾರಣಕ್ಕೋಸ್ಕರ ನಿಂತಿದೆ? ದಯವಿಟ್ಟು ತಾವು ಆರ್ಥ ಮಾಡಿಕೊಳ್ಳಬೇಕು.

ಅಧ್ಯಕ್ಷರು : ವಿಳಂಬ ಏತಕ್ಕೆ ಆಗಿದೆ ಎನ್ನುವುದು ತಮಗೆ ಗೊತ್ತಿರುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಿದ್ದಿ ಕೇಳಿದರೆ ಕಡತದಿಂದ ತೆಗೆಸಿ ಎಂದು ಇವರು ಹೇಳುತ್ತಾರೆ.

ಶ್ರೀ ಬಿ. ಶಿವರಾಮ್ : ಐದು ತಿಂಗಳ ಹಿಂದೆ ಬಂದಿದೆ, ಅದು ಆಗಿಲ್ಲವೆಂದರೆ, ಕಾರಣ ಇಲ್ಲದೆ ಈ ಪ್ರಶ್ನೆ ಕೇಳುವುದಕ್ಕೆ ಆಗುತ್ತದೆಯೇ? ದಯವಿಟ್ಟು ಅದು ಹಾಸನ ಜಿಲ್ಲೆಯಲ್ಲಿ ವಿಶೇಷವಾಗಿ ನಿಂತಿದೆ ಎಂದರೆ ಏನಾದರೂ ಕಾರಣ ಇರಬಹುದು. ಮಂತ್ರಿಗಳ ಗಮನಕ್ಕೆ ಬಂದಿದೆ, ದಯವಿಟ್ಟು ಅದನ್ನು ಮಾಡಿಸಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು : ನೀವೇ ಆಮೇಲೆ ಇವರಿಗೆ ಏನು ಕಾರಣ ಹೇಳಿ ಬಿಡಿ, ಅವರು ಸರಿ ಮಾಡುತ್ತಾರೆ.

ಶ್ರೀ ಬಿ. ಶಿವರಾಮ್ : ಸುಲಭವಾದ ವಿಷಯವಾಗಿದ್ದರೆ ನಾವು ಏಕೆ ಇಲ್ಲಿ ಚರ್ಚೆ ಮಾಡ ಬೇಕಾಗಿತ್ತು. ನಿಮಗೆ ಗೊತ್ತಿದೆ, ನಾವು ಕೆಲವು ವಿಚಾರಗಳನ್ನು ಇಲ್ಲಿ ಬಿಡಿಸಿ ಕೇಳುವುದಕ್ಕಾಗುವುದಿಲ್ಲ. ಅದಕ್ಕಾಗಿ ನಿಮ್ಮ ಕಛೇರಿಗೂ ಹಲವಾರು ಸಾರಿ ಬಂದು ಕೇಳಿದ್ದೇವೆ.

ಶ್ರೀ ಎಸ್. ಎಸ್. ಪಾಟೀಲ್ : ಯಾವ ಬ್ಯಾಂಕುಗಳನ್ನು ತಡೆಹಿಡಿದಿಲ್ಲ. ಖಂಡಿತವಾಗಿ ಅದು ರಿಜಿಸ್ಟ್ರಾರ್ ಲೆವಲ್‌ನಲ್ಲಿ ಯಾವ ರೀತಿಯಾಗಿ ನಿಂತಿದೆ ನೋಡಿ ರಿಜಿಸ್ಟ್ರೇಷನ್ ಮಾಡಿಸಿಕೊಡುತ್ತೇನೆ.

ಶ್ರೀ ಬಿ. ಶಿವರಾಮ್ : ಕಾರಣ ಇಲ್ಲದೆ ವಿಳಂಬವಾಗಿದ್ದರೆ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳತ್ತೀರೋ?

ಶ್ರೀ ಎಸ್. ಎಸ್. ಪಾಟೀಲ್ : ರಿಸರ್ವ್ ಬ್ಯಾಂಕಿಗೆ ಹೋಗಿರುತ್ತದೆ, ಮತ್ತೆ ವಾಪಸ ಬಂದಿರುತ್ತದೆ.

ಶ್ರೀ ಬಿ. ಶಿವರಾಮ್: ಎಲ್ಲಾ ರೂಲ್ಸ್ ಫಾಲೋ ಮಾಡಿ ವಿಳಂಬವಾಗಿದ್ದರೆ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೀರೋ?

ಅಧ್ಯಕ್ಷರು : ನೀವು ಲೆಟರ್ ಕೊಟ್ಟು ಬಿಡಿ ನಾನು ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳಿದರು.

ಶ್ರೀ ಬಿ. ಶಿವರಾಮ್ : ವಿನಾ ಕಾರಣ ವಿಳಂಬವಾಗಿದೆ ಎಂದು ಗೊತ್ತಾದ ಮೇಲೆ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೀರೋ?

ಅಧ್ಯಕ್ಷರು : ನೀವು ಪತ್ರ ಕೊಟ್ಟುಬಿಡಿ, ಈ ಎಲ್ಲಾ ವಿಷಯ ಉಲ್ಲೇಖ ಮಾಡಿ ನಾನು ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದರು.

(ಎ) ಎಲೆಕ್ಟ್ರಾನಿಕ್‌ಮೀಟರುಗಳನ್ನು ಅಳವಡಿಸಿದ ನಂತರ ಡಿಪಾಸಿಟ್ ವಸೂಲಿ

ಶ್ರೀ ರಾಮದಾಸ್. ಎ. (ಕೃಷ್ಣರಾಜ) : ಸನ್ಮಾನ್ಯ ಸಭಾಧ್ಯಕ್ಷರೆ, ಇಲ್ಲಿ ಸದನ ನಡೆಯುವಂತಹ ಸಮಯದಲ್ಲಿ ಎಲ್ಲಾ ಅಧಿಕಾರಿಗಳು ಅಧಿಕಾರಿಗಳ ಗ್ಯಾಲರಿಯಲ್ಲಿ ಕುಳಿತಿರುತ್ತಾರೆ. ಸಾಮಿರಾರು ರೂಪಾಯಿ ಸಂಬಳ ತೆಗೆದುಕೊಳ್ಳುವಂತಹ ಅಧಿಕಾರಿಗಳು ಬೆಳಿಗ್ಗೆಯಿಂದ ಸಂಜೆಯವರೆಗೆ ಇಲ್ಲಿ ಕುಳಿತಿರುತ್ತಾರೆ. ಈ ಪ್ರಶ್ನೆ, ನನಗೆ ಇವತ್ತು ಏಕ ಕಾಡುತ್ತಿದೆ ಅಂದರೆ, 12ನೇ ತಾರೀಖು ಇದೇ ಸದನದಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಗಳು ಕೆ.ಇ.ಬಿ. ಬಗ್ಗೆ ಚರ್ಚೆಯಾದ ಸಮಯದಲ್ಲಿ ಸದನದಲ್ಲಿ ಒಂದು ಆಶ್ವಾಸನೆ ನೀಡಿ ಒಂದು ಆದೇಶ ಮಾಡಿದರು. ಎಲೆಕ್ಟ್ರಾನಿಕ್ ಮೀಟರ್‌ಗಳನ್ನು ಅಳವಡಿಸುವವರೆಗೆ ಡೆಪಾಸಿಟ್ ಹಣವನ್ನು ನಾವು ಪಡೆಯುವುದಿಲ್ಲ ಎನ್ನುವಂತಹ ವಿಚಾರವನ್ನು ಸದನದಲ್ಲಿ ಹೇಳಿದರು. ಮತ್ತೆ ಈಗ ರಾಜ್ಯಾದ್ಯಂತ ಈ ತಿಂಗಳ ಬಿಲ್ ಕೊಡುವಂತಹ ಸಮಯದಲ್ಲಿ ಆ ಬಿಲ್‌ಗಳ ಜೊತೆಯಲ್ಲಿ 405 ರೂಪಾಯಿ ಫಸ್ಟ್. ಇನ್‌ಸ್ಟಾಲ್‌ಮೆಂಟ್ ಮೀಟರ್ ಡೆಪಾಸಿಟ್ ಎಂದು ಎಲ್ಲಾ ಕಡೆ ಬಿಲ್‌ಗಳನ್ನು ಕೊಡಲಾಯಿತು. ಜೊತೆಗೆ ಬಿಲ್ ಕಟ್ಟುವ ಸಂದರ್ಭದಲ್ಲಿ ಡೆಪಾಸಿಟ್ ಹಣ ಕೊಡದೆ ಹೋದರೆ ಹಿಂತೆಗೆದುಕೊಳ್ಳಲಾಗುವುದು ಎಂದು ಎಲ್ಲಾ ಕಡೆ ನಿರಾಕರಿಸಲಾಗಿದೆ. ಮೈಸೂರು ಮತ್ತು ಶಿವಮೊಗ್ಗ ಜಿಲ್ಲೆಯಲ್ಲಿ ಬಂದಿರುವಂತಹ ವಿಚಾರಗಳು ಕೂಡ ಪತ್ರಿಕೆಯಲ್ಲಿ ಬಂದಿದೆ. ಈ ವಿಚಾರದಲ್ಲಿ ಪ್ರಮುಖವಾಗಿ ಈ ಆದೇಶ ಎಲ್ಲಿಯವರೆಗೆ ಮುಟ್ಟಿದೆ, ಇದು ಜನಸಾಮಾನ್ಯರಿಗೆ ಮುಟ್ಟುವಂತಹ ಕೆಲಸ ಏನಾಗಿದೆ ಎಂದು ತಮ್ಮ ಮೂಲಕ ಸನ್ಮಾನ್ಯ ಮುಖ್ಯ ಮಂತ್ರಿಗಳಿಗೆ ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆ ವಿಷಯದಲ್ಲಿ ನಾವೆಲ್ಲರೂ ಧರಣಿ ಮಾಡಿದ ಮೇಲೆ ನಿಮ್ಮ ಛೇಂಬರ್‌ನಲ್ಲಿ ಒಂದು ಇತ್ಯರ್ಥಕ್ಕೆ ಬರಲಾಯಿತು. ಆ ಒಪ್ಪಂದದ ಪ್ರಕಾರ ಸರ್ಕಾರಿ ಆಜ್ಞೆಯನ್ನು ಹೊರಡಿಸುತ್ತೇವೆಂದು ಹೇಳಿದರು. ಪಂಪ್‌ಸೆಟ್ಸ್ ಹಾಕತಕ್ಕಂತಹವರಿಂದ 960 ರೂಪಾಯಿ ಕೂಡ ಇವತ್ತು ಕಲೆಕ್ಟ್ ಮಾಡುತ್ತಿದ್ದಾರೆ. ಮತ್ತು ಆಲ್ ಎಲೆಕ್ಟ್ರಿಕ್ ಹೋಂ ಬಗ್ಗೆ ಕೂಡ 1,300 ರೂಪಾಯಿ ಡಿಪಾಸಿಟ್ ಹಣವನ್ನು ಮೀಟರ್ಸ್ ಫಿಕ್ಸ್ ಮಾಡಿದ ಮೇಲೆ ಮೂರು ಕಂತಿನಲ್ಲಿ ತೆಗೆದುಕೊಳ್ಳಬೇಕೆಂದು ಚರ್ಚೆಯಾಯಿತು. ಇವೆಲ್ಲಾ ಚರ್ಚೆ ಆದ ಮೇಲೆ ಒಪ್ಪಿಕೊಳ್ಳುತ್ತೇವೆ ಎಂದು ಮುಖ್ಯ ಮಂತ್ರಿಗಳು ಅನೌನ್ಸ್ ಕೂಡ ಮಾಡಿದರು. ಆದರೆ ಅದಕ್ಕೆ ತದ್ವಿರುದ್ಧವಾಗಿ ಅಧಿಕಾರಿಗಳು ಅಲ್ಲಿ ವಸೂಲು ಮಾಡುತ್ತಿದ್ದಾರೆ. ಅವರು ಹೇಳುತ್ತಿದ್ದಾರೆ, ನಮಗೆ ಯಾವುದೂ ಕೂಡ ಇನ್‌ಸ್ಟ್ರಕ್ಷನ್ಸ್ ಬಂದಿಲ್ಲ. ಕೇವಲ ಪೆನಾಲ್ಟಿ ಹಾಕತಕ್ಕಂಥದ್ದು 10,000 ದಿಂದ 5,000 ಮತ್ತು 5,000 ದಿಂದ 2,500 ರೂಪಾಯಿ ಮಾತ್ರ. ಮತ್ತು ಉಳಿದಂಥದ್ದು ಯಾವುದಕ್ಕೂ ವರ್ಕ್ ಆರ್ಡರ್ ಕೊಟ್ಟಿದ್ದರು, ಅಷ್ಟಕ್ಕೆ ಮಾತ್ರ ನಮಗೆ ಇನ್‌ಸ್ಟ್ರಕ್ಷನ್ಸ್ ಬಂದಿವೆ. ಉಳಿದ ಯಾವುದಕ್ಕೂ ಇನ್‌ಸ್ಟ್ರಕ್ಷನ್ಸ್ ಬಂದಿಲ್ಲ ಎಂದು ಇವತ್ತು ಅಧಿಕಾರಿಗಳು ಹೇಳಿ ಅವರು ವಸೂಲು ಮಾಡುತ್ತಿದ್ದಾರೆ. ಬಿಲ್ ಕೊಡುತ್ತಿದ್ದಾರೆ, ಈಗಾಗಲೇ ಇದು ಎಲ್ಲಾ ಕಡೆ ನಡೆದಿದೆ. ಇದಕ್ಕೆ ಇಲ್ಲಿ ಆದಂತಹ ನಿರ್ಣಯದ ವಿರುದ್ಧವಾಗಿ ಆ ಅಧಿಕಾರಿಗಳು ವರ್ತನೆ ಮಾಡಿದರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ, ಏನು ಇನ್‌ಸ್ಟ್ರಕ್ಷನ್ಸ್ ಕೊಟ್ಟಿರಿ, ಸರ್ಕ್ಯುಲರ್ ಕೊಟ್ಟಿರಿ,